# ಉಪನ್ಯಾಸಕ ವೃತ್ತಿ ಪವಿತ್ರವಾದುದು: ವೆಂಕಟರಾವ ದೇಸಾಯಿ



ಕೊಪ್ಪಳ : ಉಪನ್ಯಾಸಕ ವೃತ್ತಿ ಪವಿತ್ರವಾದುದು. ಈ ವೃತ್ತಿಯಿಂದ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ನಿರ್ಮಾಣ ಮಾಡಬಹುದಲ್ಲದೇ, ಅವರನ್ನು ಸುಸಂಸ್ಕೃತ ನಾಗರಿಕರನ್ನಾಗಿ ಮಾಡುವ ಪವಿತ್ರ ಹೊಣೆಗಾರಿಕೆ ಇರುತ್ತದೆ. ಈ ವೃತ್ತಿಯನ್ನು ನಾನು ಬಹಳ ಪ್ರೀತಿಯಿಂದ ಸ್ವೀಕರಿಸಿ, ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸಿದ್ದೇನೆ. ನನ್ನ ಸೇವಾ ಅವಧಿಯನ್ನು ಬಹಳ ತೃಪ್ತಿಯಿಂದ ಕಳೆದಿದ್ದೇನೆ. ಹೀಗಾಗಿ ನಾನು ನೆಮ್ಮದಿಯಿಂದ ನಿವೃತ್ತಿಯಾಗಿದ್ದೇನೆ ಎಂದು ಹಿರೇಸಿಂದೋಗಿ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಇತಿಹಾಸ ಉಪನ್ಯಾಸಕರಾದ ವೆಂಕಟರಾವ ದೇಸಾಯಿ ಹೇಳಿದರು.

ಅವರು ಕೊಪ್ಪಳ ತಾಲೂಕಿನ ಹಿರೇಸಿಂದೋಗಿ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು.

ಮಹಾವಿದ್ಯಾಲಯದ ಅರ್ಥಶಾಸ್ತ್ರ ಉಪನ್ಯಾಸಕರಾದ ಹನುಮಂತಪ್ಪ ಅಂಡಗಿ ಚಿಲವಾಡಗಿ ಮಾತನಾಡುತ್ತಾ, ನೌಕರರು ವೃತ್ತಿಗೆ ಸೇರಿದ ಮೇಲೆ ನಿವೃತ್ತಿಯಾಗುವುದು ಕಡ್ಡಾಯವಾಗಿರುತ್ತದೆ. ಆದರೆ ನಿವೃತ್ತಿಯ ನಂತರ ಬಹಳಷ್ಟು ನೌಕರರು ಮನೆ ಸೇರಿ, ಏಕಾಂಗಿಯಾಗಿ ಜೀವನವನ್ನು ನಡೆಸಿ ಹಲವಾರು ರೋಗಗಳನ್ನು ಬರಮಾಡಿಕೊಳ್ಳುತ್ತಾರೆ. ನಿವೃತ್ತಿಯ ನಂತರ ನೌಕರರು ಹಲವಾರು ಪ್ರವೃತ್ತಿಗಳನ್ನು ಬೆಳೆಸಿಕೊಳ್ಳಬೇಕು. ಅಂದರೆ ಗ್ರಂಥಗಳನ್ನು, ಪತ್ರಿಕೆಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ನಿವೃತ್ತಿಯಾಗಿರುವುದು ನೆನಪುಬಾರದ ಹಾಗೆ ತಮ್ಮನ್ನು ತಾವು ಸಮಾಜಕ್ಕೆ ಉಪಯುಕ್ತವಾಗುವ ಯಾವುದಾದರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ರಾಚಪ್ಪ ಜಿ.ಕೇಸರಬಾವಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತಾ, ವೆಂಕಟರಾವ ದೇಸಾಯಿ ಅವರು ಅಖಂಡ 36 ವರ್ಷಗಳ ಕಾಲ ಉಪನ್ಯಾಸಕ ವೃತ್ತಿಯನ್ನು ಬಹಳ ಪ್ರಾಮಾಣಿಕತೆ ಮತ್ತು ಶಿಸ್ತಿನಿಂದ ನಿರ್ವಹಿಸಿದ್ದಾರೆ. ಇಂದಿನ ದಿನಮಾನಗಳಲ್ಲಿ ಮನುಷ್ಯನ ಆರೋಗ್ಯ ಮಹತ್ವದ್ದಾಗಿದೆ. ಆರೋಗ್ಯವೇ ಭಾಗ್ಯ ಎನ್ನುವಂತೆ ಈ ಉಪನ್ಯಾಸಕರು ಗಜಕಾಯ ದೇಹವುಳ್ಳವರಾಗಿ, ನಿವೃತ್ತಿಯ ನಂತರವು ಉತ್ತಮ ಆರೋಗ್ಯ ಕಾಪಾಡಿಕೊಂಡಿರುವುದು ಸಂತಸದ ಸಂಗತಿ. ಅವರ ನಿವೃತ್ತಿಯ ಜೀವನ ಸುಖಕರವಾಗಲಿ ಎಂದು ಶುಭ ಹಾರೈಸಿದರು.ಹಿರಿಯ ಉಪನ್ಯಾಸಕರಾದ ರೇಖಾ ತೆಂಬದಮನಿ, ಲತಾ ಕೆ.ಜಿ. ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಉಮಾಕಾಂತರಾವ ಸ್ವಾಗತಿಸಿದರು. ಐ.ಎನ್.ಪಾಟೀಲ ನಿರೂಪಿಸಿದರು. ಬಸವರಾಜೇಶ್ವರಿ ಸವಡಿ ವಂದಿಸಿದರು.ಫೋಟೋ : ಕೊಪ್ಪಳ ತಾಲೂಕಿನ ಹಿರೇಸಿಂದೋಗಿ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ನಿವೃತ್ತಿಯಾದ ಇತಿಹಾಸ ಉಪನ್ಯಾಸಕರಾದ ವೆಂಕಟರಾವ ದೇಸಾಯಿಯವರನ್ನು ಸನ್ಮಾನಿಸಲಾಯಿತು. ಹನುಮಂತಪ್ಪ ಅಂಡಗಿ ಚಿಲವಾಡಗಿ, ರಾಚಪ್ಪ ಜಿ.ಕೇಸರಬಾವಿ ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು.

# ಸಂಗೊಳ್ಳಿ ರಾಯಣ್ಣನ ಮೂರ್ತಿ ತೆರವು ಖಂಡಿಸಿ ಪ್ರಗತಿಪರ ಸಂಘಟನೆಗಳ ಪ್ರತಿಭಟನೆ




ಮಸ್ಕಿ: ಪಟ್ಟಣದಲ್ಲಿ ಸ್ವತಂತ್ರ ಸೇನಾನಿ ಚನ್ನಮ್ಮನ ಬಲಗೈ ಬಂಟ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿ ತೆರವುಗೊಳಿಸುವುದು ಖಂಡಿಸಿ ಮಸ್ಕಿ ತಹಶೀಲ್ದಾರ್ ಕಚೇರಿ ಆವರಣದಲ್ಲಿ ತಾಲ್ಲೂಕಿನ ವಿವಿಧ ಪ್ರಗತಿಪರ ಸಂಘಟನೆ ಗಳ ಮೂಲಕ ಮನವಿ ಪತ್ರ ಸಲ್ಲಿಸಿದರು.

ಈ ಸಂಧರ್ಭದಲ್ಲಿ ಮಾತನಾಡಿದ ಹನುಮೇಶ್ ಬಾಗೋಡಿ ಬೆಳಗಾವಿ ಜಿಲ್ಲಾಡಳಿತ ಕೂಡಲೇ ಎಚ್ಚೆತ್ತು ಹುಟ್ಟು ಹೋರಾಟಗಾರ ಸಂಗೊಳ್ಳಿ ರಾಯಣ್ಣ ಮೂರ್ತಿ ಮರುಸ್ಥಾಪನೆ ಮಾಡಬೇಕು ಮತ್ತು ರಾಜ್ಯದಲ್ಲಿ ಮುಂದೆ ಈ ತರ ಘಟನೆ ನಡೆಯದಂತೆ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಂಗೊಳ್ಳಿ ರಾಯಣ್ಣ ಅಭಿಮಾನ ಬಳಗ, ಛಲವಾದಿ ಮಹಾಸಭಾ,ನಮ್ಮ ಕನ್ನಡ ರಕ್ಷಣಾ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ,ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷರು ಸದಸ್ಯರು, ಹಾಲಮತ ಸಮಾಜದ ಯುವಕರು ಭಾಗವಹಿಸಿದ್ದರು.

# ಪ್ರಶಾಂತ್ ಭೂಷಣ್ ವಿರುದ್ಧ ನ್ಯಾಯಾಂಗ ನಿಂದನೆಯ ತೀರ್ಪನ್ನು ವಾಪಸ್ ಪಡೆಯಲು ಆಗ್ರಹ



ಬಳ್ಳಾರಿ ಆ 20. ಬಳ್ಳಾರಿ ನಗರದ ಜಿಲ್ಲಾ ನ್ಯಾಯಾಲಯದ ಮುಖ್ಯ ದ್ವಾರದ ಮುಂದೆ ಪ್ರಗತಿಪರ ಸಂಘಟನೆಗಳು, ರೈತ ಸಂಘಟನೆಗಳು, ನ್ಯಾಯವಾದಿಗಳು ಮತ್ತು ಎ.ಐ.ಡಿ.ವೈ.ಒ, ಎ.ಐ.ಡಿ.ಎಸ್.ಒ, ಎ.ಐ.ಎಮ್.ಎಸ್.ಎಸ್ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಪ್ರಶಾಂತ್ ಭೂಷಣ್ ಅವರ ವಿರುದ್ಧ ನ್ಯಾಯಾಂಗ ನಿಂದನೆಯ ತೀರ್ಪನ್ನು ಹಿಂಪಡೆಯಿರಿ, ವಾಕ್ ಸ್ವಾತಂತ್ರ ನಮ್ಮ ಹಕ್ಕು, ಮೂಲಭೂತ ಹಕ್ಕುಗಳ ಮೇಲಿನ ದಾಳಿಗೆ ಧಿಕ್ಕಾರ, ಹೋರಾಟಗಾರರ ಮೇಲಿನ ದುರುದ್ದೇಶದ ನಿಂದನೆಗೆ ಧಿಕ್ಕಾರ ಎಂಬ ಘೋಷಣೆಗಳನ್ನು ಕೂಗಿದರು.

ಎ.ಐ.ಯು.ಟಿ.ಯಿ.ಸಿ ರಾಜ್ಯ ಅಧ್ಯಕ್ಷರಾದ ಕೆ.ಸೋಮಶೇಖರ್ ಮಾತನಾಡಿ – ಪ್ರಜಾತಾಂತ್ರಿಕ ಹಕ್ಕುಗಳು ನಮಗೆ ಯಾರೂ ಬಳುವಳಿಯಾಗಿ ಕೊಟ್ಟಿದ್ದಲ್ಲ, ಹೋರಾಟದಿಂದ ಗಳಿಸಿಕೊಂಡದ್ದು. ಒಬ್ಬ ಖ್ಯಾತ ನ್ಯಾಯವಾದಿಗಳು ಹಾಗೂ ಹಿರಿಯ ಹೋರಾಟಗಾರರೂ ಆದ ಪ್ರಶಾಂತ ಭೂಷಣರವರ ಮೇಲಿನ ನ್ಯಾಯಾಂಗ ನಿಂದನೆಯ ಪ್ರಕರಣವು ದುರುದ್ದೇಶಪೂರಿತವಾಗಿದೆ. ಓರ್ವ ಖ್ಯಾತ ನ್ಯಾಯವಾದಿ ಮಾಡಿದ ಎರಡು ಸಾಲುಗಳ ಟ್ವೀಟ್ ನಿಂದ ತನ್ನ ಘನತೆ ಮತ್ತು ಗೌರವಕ್ಕೆ ಬೆದರಿಕೆ ಉಂಟಾಗಿದೆ ಎಂದು ಭಾವಿಸುವಷ್ಟರ ಮಟ್ಟಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ತನ್ನದೇ ಸ್ವಂತ ಸಮಗ್ರತೆ ಮತ್ತು ನೈತಿಕತೆಯ ಮೇಲೆ ವಿಶ್ವಾಸ ಕಳೆದುಕೊಂಡಿದೆ ಎಂಬುದನ್ನು ನಾವು ಗಂಭೀರ ಕಾಳಜಿಯಿಂದ ಗಮನಿಸುತ್ತಿದ್ದೇವೆ. ಪ್ರಜೆಗಳ ಜನತಾಂತ್ರಿಕ ಹಕ್ಕುಗಳಿಗೆ ಮತ್ತು ನಾಗರಿಕ ಹಕ್ಕುಗಳಿಗೆ ಸಂಬಂಧಿಸಿದ ಹಲವಾರು ತುರ್ತು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವಾಗ, ಈ ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆಯ ಪ್ರಕರಣವನ್ನು ತರಾತುರಿಯಲ್ಲಿ ಕೈಗೆತ್ತಿಕೊಂಡು ಮೂವರು ನ್ಯಾಯಾಧೀಶರ ಪೀಠ ನೀಡಿದ ತೀರ್ಪು ಉತ್ತರಕ್ಕಿಂತ ಹೆಚ್ಚಿನ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿರಿಯ ವಕೀಲರು ಮತ್ತು ಹೋರಾಟಗಾರರಾದ ಟಿ.ಜಿ.ವಿಠ್ಠಲ್ ರವರು ಮಾತಾಡುತ್ತಾ  ವಾಸ್ತವದಲ್ಲಿ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಮೇಲೆ ಭ್ರಷ್ಟಾಚಾರದ ಆರೋಪಗಳು ಹೊಸದೇನಲ್ಲ. ಪ್ರಶಾಂತ್ ಭೂಷಣ್ ಅವರು ಒಂಬತ್ತು ವರ್ಷಗಳ ಹಿಂದೆಯೇ ಇಂತಹ ಆರೋಪವನ್ನು ಮಾಡಿದ್ದರು ಮತ್ತು ನ್ಯಾಯಾಲಯವು ಇದರಲ್ಲಿ ಯಾವುದೇ ದುರುದ್ದೇಶವನ್ನು ಕಂಡಿರಲಿಲ್ಲ. ಹಾಗಿದ್ದರೆ ಈಗಲೇ ಏಕೆ? ಈ ನಿರ್ಭೀತ, ಪ್ರಾಮಾಣಿಕ ನ್ಯಾಯವಾದಿ ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ ಮತ್ತು ಪ್ರತಿಯೊಂದು ಅನ್ಯಾಯದ ಘಟನೆಯ ವಿರುದ್ಧ ದನಿ ಎತ್ತುತ್ತಿದ್ದಾರೆ ಎಂಬ ಕಾರಣದಿಂದಲೇ? ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಕೆಡವುತ್ತಿರುವ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಫ್ಯಾಸಿಸ್ಟ್ ಮಾದರಿಯಲ್ಲಿ ಕತ್ತು ಹಿಸುಕುತ್ತಿರುವ ಈ ವಾತಾವರಣದಲ್ಲಿ, ಸರ್ವೋಚ್ಚ ನ್ಯಾಯಾಲಯದ ಈ ತೀರ್ಪು ಸರ್ವಾಧಿಕಾರಿ ಶಕ್ತಿಗಳಿಗೆ ಇನ್ನಷ್ಟು ಪುಷ್ಟಿ ನೀಡಿದಂತಾಗುತ್ತದೆ ಎಂದು ನಾವು ಅನಿವಾರ್ಯವಾಗಿ ಹೇಳಬೇಕಾಗಿದೆ.ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯರಾದ ಕೋಟೇಶ್ವರರಾವ್ ಮಾತನಾಡುತ್ತಾ– ಈ ನ್ಯಾಯಾಂಗ ನಿಂದನೆಯ ತೀರ್ಪನ್ನು ವಾಪಸ್ ಪಡೆಯಬೇಕೆಂದು ನಾವು ಈ ಮೂಲಕ ಬಲವಾಗಿ ಒತ್ತಾಯಿಸುತ್ತೇವೆ ಮತ್ತು ಶ್ರೀ ಪ್ರಶಾಂತ್ ಭೂಷಣ್ ಅವರಿಗೆ ಯಾವುದೇ ಶಿಕ್ಷೆ ನೀಡಬಾರದೆಂದು ಅಭಿಪ್ರಾಯ ಪಡುತ್ತೇವೆ ಎಂದರು.

ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಬರೆದ ಮನವಿ ಪತ್ರವನ್ನು ಬಳ್ಳಾರಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ಕೆ.ಬಿ.ಅಸೋಡೆ ಅವರ ಮೂಲಕ ಸಲ್ಲಿಸಲಾಯಿತು. ಈ ಪ್ರತಿಭಟನೆಯನ್ನು ಜನ ಸಂಗ್ರಾಮ ಪರಿಷತ್ ನ ಶ್ರೀಶೈಲ ಆಲ್ದಳ್ಳಿ ಅವರು ನಿರ್ವಹಿಸಿದರು. ವಕೀಲರಾದ ಚಾಗನೂರು ಮಲ್ಲಿಕಾರ್ಜುನ ರೆಡ್ಡಿ, ಸಂಡೂರು ಟಿ.ಎಮ್.ಶಿವಕುಮಾರ್, ಕಾರ್ಮಿಕ ಸಂಘಟನೆಯ ಮುಖಂಡರಾದ ಆರ್.ಸೋಮಶೇಖರ್ ಗೌಡ, ಸತ್ಯಬಾಬು, ಚಂದ್ರಕುಮಾರಿ, ರೈತ ಸಂಘಟನೆಗಳ ಮುಖಂಡರಾದ ಮಾಧವರೆಡ್ಡಿ, ಹುಲುಗಪ್ಪ, ಎ.ಐ.ಡಿ.ಎಸ್.ಒ ನ ರಾಷ್ಟ್ರ ಉಪಾಧಕ್ಷರಾದ ಡಾ/ಪ್ರಮೋದ್, ಸುರೇಶ್, ಗುರಳ್ಳಿ ರಾಜ, ರವಿಕಿರಣ್.ಜೆ.ಪಿ, ಎ.ಐ.ಡಿ.ವೈ.ಒ ನ ಯರ್ರಿಸ್ವಾಮಿ.ಹೆಚ್, ಜಗದೀಶ್ ನೇಮಕಲ್ ಮತ್ತು ಎ.ಐ.ಎಮ್.ಎಸ್.ಎಸ್ ನ ಎ.ಶಾಂತಾ, ವಿದ್ಯಾವತಿ ಮುಂತಾದವರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಆಡಳಿತ ವಿಕೇಂದ್ರೀಕರಣದ ರೂವಾರಿ ರಾಜೀವ್‌ಗಾಂಧಿ: ಪ್ರೊ.ಎ.ಹೇಮಣ್ಣ



ಬಳ್ಳಾರಿ ಆ.20 ದೇಶದ ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿಯವರು ತಂತ್ರಜ್ಞಾನ, ಅರ್ಥವ್ಯವಸ್ಥೆ, ಗ್ರಾಮ ಪಂಚಾಯಿತಿ ಸೇರಿದಂತೆ ರಾಜಕೀಯ ಆಡಳಿತ ವಿಕೇಂದ್ರಕರಣ, ಮತದಾನದ ವಯೋಮಿತಿ, ಗಾಂಧೀಜಿಯವರ ಕನಸು ನನಸು ಸೇರಿದಂತೆ ಅನೇಕ ಜನಪರ ಕಾರ್ಯಗಳನ್ನು ಮಾಡಿದ್ದಾರೆ. ಅವರನ್ನು ಇಂದು ಸ್ಮರಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಪ್ರಾಂಶುಪಾಲರಾದ ಪ್ರೊ.ಎ.ಹೇಮಣ್ಣ ಅವರು ತಿಳಿಸಿದರು.

ಅವರು ಸ್ಥಳೀಯ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಸ್ವಾಯತ್ತ ಕಾಲೇಜಿನಲ್ಲಿಂದು ರಾಷ್ಟ್ರೀಯ ಸೇವಾ ಯೋಜನೆವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸದ್ಭಾವನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ವಿದ್ಯಾರ್ಥಿಗಳು ಅಥವಾ ಈ ದೇಶದ ಪ್ರತಿಯೊಬ್ಬ ಪ್ರಜೆಯು ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ, ಭೇದಭಾವವಿಲ್ಲದೆ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯನಿರ್ವಹಿಸಬೇಕು. ವೈಯಕ್ತಿಕವಾಗಿಯಾಗಲಿ ಅಥವಾ ಸಾಮೂಹಿಕವಾಗಿ ಆಗಲಿ ನಮ್ಮಲ್ಲಿರುವ ಭೇದಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸಿಕೊಂಡಾಗ ಮಾತ್ರ ದೇಶ ಶಾಂತಿ ಸುವ್ಯವಸ್ಥೆಯಿಂದ ಮುನ್ನಡೆಯುತ್ತದೆ ಎಂದು ನುಡಿದರು.ಆರಂಭದಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕ ಭೀಮೇಶ್ ಮಾತನಾಡಿ ಜಾತಿ, ಮತ, ಧರ್ಮ ಎಂಬ ಭೇದಭಾವವನ್ನು ಮೀರಿ ನಾವೆಲ್ಲರೂ ಒಂದು. ಮತ್ತು ಸಹೋದರತ್ವದಿಂದ ಕೂಡಿ ಬಾಳಬೇಕು. ಹಾಗೆಯೇ ರಾಜೀವ್ ಗಾಂಧಿಯವರು ಪಕ್ಷಾಂತರ ಕಾಯ್ದೆ ಹಾಗೂ ಮತದಾನದ ವಯಸ್ಸನ್ನು 18 ವರ್ಷಕ್ಕೆ ಸೀಮಿತಗೊಳಿಸಿದ ಮಹಾನುಭಾವ ಎಂದು ಹೇಳಿದರು.

ಇದೇ ವೇಳೆ ಸಮಾರಂಭದಲ್ಲಿ ಪ್ರತಿಜ್ಞಾ ವಿಧಿಯನ್ನು ಎನ್.ಸ್.ಎಸ್. ಸ್ವಯಂ ಸೇವಕ ಸಿದ್ದರಾಮ ಬೋಧಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪರೀಕ್ಷಾ ನಿಯಂತ್ರಕರು ಮತ್ತು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಶ್ರೀನಿವಾಸಮೂರ್ತಿ, ವಿವಿಧ ವಿಭಾಗದ ಪ್ರಾಧ್ಯಾಪಕರಾದ ಆರ್.ಮನೋಹರ್, ಬಿ.ನಾಗರಾಜ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಾದ ಜಿ.ಕೊಟ್ರಪ್ಪ, ಗುರುಬಸಪ್ಪ, ಡಾ.ಇಸ್ಮಾಯಿಲ್ ಎಂ.ಮಕಾಂದರ್, ಡಾ.ಇಸ್ಮಾಯಿಲ್ ಎಂ.ಮಕಾಂದರ್, ಅಂಗಡಿ ನಾಗರಾಜ್, ದೇವಣ್ಣ, ಶ್ರೀಮತಿ ಜಬೀನ್ ಸುಲ್ತಾನ್, ಕೆ.ಎನ್.ರಾಮಾಂಜನೇಯ, ಪಂಪನಗೌಡ, ಕಲ್ಯಾಣಬಸವ, ಶಶಿಕಾಂತ, ಬಸವರಾಜ, ಡಾ.ಅಣ್ಣಪ್ಪಸ್ವಾಮಿ ಹೆಚ್.ಡಿ, ಕನ್ಯಾಕುಮಾರಿ, ಅಮರಗಿರಿ ಮುಂತಾದವರು ಹಾಜರಿದ್ದರು. ಕೊನೆಯಲ್ಲಿ ಗುರುಬಸಪ್ಪ ವಂದನಾರ್ಪಣೆ ಮಾಡಿದರು.

# ಸಂದರ್ಶಕ ವೈದ್ಯರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಅರ್ಜಿ ಆಹ್ವಾನ

ವಿಜಯಪುರ ಆ.20 : ಕೃಷಿ ಮಹಾವಿದ್ಯಾಲಯ, ವಿಜಯಪುರದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ವೈದ್ಯಕೀಯ ಸೌಲಭ್ಯ ಒದಗಿಸುವ ಸಲುವಾಗಿ ವಿಸಿಟಿಂಗ್ ಡಾಕ್ಟರ್ ಹುದ್ದೆಗೆ 179 ದಿನಗಳವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅದರಂತೆ ಈ ವಿಸಿಟಿಂಗ್ ಡಾಕ್ಟರ್ ಹುದ್ದೆಗೆ ಅರ್ಜಿ ಸಲ್ಲಿಸುವವರು ಎಮ್.ಬಿ.ಬಿ.ಎಸ್ ಮಾಡಿರಬೇಕು, ಅವರಿಗೆ 20,000 ಸಂಬಳ ನೀಡಲಾಗುತ್ತದೆ. ನೇಮಕಾತಿ ಪಡೆಯಬಯಸುವ ಅಭ್ಯರ್ಥಿಗಳು ನಮೂದಿಸಿದ ಅರ್ಜಿ ನಮೂನೆಯನ್ನು ಎರಡು ಪ್ರತಿಗಳೊಂದಿಗೆ ದಿನಾಂಕ :21–8–2020 ರಂದು ಮುಂಜಾನೆ 10.30 ಗಂಟೆಗೆ ಸಂದರ್ಶನ ಕೊಠಡಿ, ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ವಿಜಯಪುರದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಎಂದು ಕೃಷಿ ಮಹಾವಿದ್ಯಾಲಯ, ವಿಜಯಪುರದ ಡೀನ್ ಅವರು ತಿಳಿಸಿದ್ದಾರೆ.ಅಭ್ಯರ್ಥಿಗಳು ಸಂದರ್ಶನಕ್ಕೆ ಬರುವಾಗ ತಮ್ಮ ವಿದ್ಯಾರ್ಹತೆಗೆ ಸಂಬಂಧಿಸಿದ ಎಲ್ಲ ಮೂಲ ದಾಖಲೆಗಳು ಹಾಗೂ ಅವುಗಳ ಎರಡು ಝರಾಕ್ಸ್ ಪ್ರತಿಗಳನ್ನು ಅರ್ಜಿ ನಮೂನೆಗೆ ಲಗತ್ತಿಸಿ ಸಂದರ್ಶನದ ಸಮಯದಲ್ಲಿ ತರಬೇಕು.

ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಮುಂಗಡವಾಗಿ ಕಳುಹಿಸಬಾರದು.ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹಾಜರಾಗಬೇಕು ಮತ್ತು ಯಾವುದೇ ತರದ ಭತ್ಯೆ ನೀಡಲಾಗುವುದಿಲ್ಲ. ಸದರಿ ನೇಮಕಾತಿಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಸಮಯದಲ್ಲಿ ಕಾರಣ ತಿಳಿಸದೇ ಕರ್ತವ್ಯದಿಂದ ತೆಗೆದುಹಾಕುವ ಅಧಿಕಾರ ಕೃವಿವಿಕ್ಕೆ ಇರುತ್ತದೆ ಹಾಗೂ ಕೃವಿವಿದಲ್ಲಿ ನೇರ ನೇಮಕಾತಿಗಾಗಿ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೋವಿಡ್– 19 ಬಗ್ಗೆ ಜಾಗೃತಿ ಹಾಗೂ ಯುವ ಸ್ಪಂದನದ ವಿಷಯಗಳ ಬಗ್ಗೆ ಅರಿವು ಕಾರ್ಯಕ್ರಮ

ಧಾರವಾಡಆ.20 : ಆಗಸ್ಟ್ 17 ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಧಾರವಾಡ, ಹಾಗೂ ನಮ್ಹಾನ್ಸ ಬೆಂಗಳೂರು ಇವರ ಯೋಜನೆ ಅಡಿಯಲ್ಲಿ,ಹುಬ್ಬಳ್ಳಿಯ ಬೆನಕ ವಿದ್ಯಾಮಂದಿರ ಶಾಲೆಯ ಆಡಳಿತಾಧಿಕಾರಿಗಳಿಗೆ ಮತ್ತು ಶಿಕ್ಷಕರಿಗೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕೋವಿಡ್– 19 ಬಗ್ಗೆ ಜಾಗೃತಿ ಹಾಗೂ ಯುವ ಸ್ಪಂದನದ ವಿಷಯಗಳ ಬಗ್ಗೆ ಅರಿವು ಮೂಡಿಸಿ, ಅಧಿಕಾರಿಗಳಿಗೆ ಹಾಗೂ ಶಿಕ್ಷಕರಿಗೆ ವಿವಿಧ ರೀತಿಯ ಸ್ವಚ್ಛತೆ, ಸಾನಟೈಜರ್ ಬಳಕೆ, ಮಾಸ್ಕ ಧರಿಸುವದು ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದರ ಬಗ್ಗೆ ಮಾಹಿತಿ ತಿಳಿಸಲಾಯಿತು. ಪ್ರಸ್ತುತ ಜನರಲ್ಲಿ ಇರುವ ಗೊಂದಲ ಹಾಗೂ ಮಾನಸಿಕ ಖಿನ್ನತೆ ಬಗ್ಗೆ ಸೂಕ್ತ ಮಾಹಿತಿ ಮತ್ತು ಮಾರ್ಗದರ್ಶನ ನೀಡುವಲ್ಲಿ ಯುವಸ್ಪಂದನ ಕೇಂದ್ರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಯುವಪರಿವರ್ತಕರಾದ ಶಿವರಾಜಕುಮಾರ.ಎಸ್ ತಿಳಿಸಿದರು.

ಇಂದಿನ ಯುವಜನತೆ ಆಧುನಕ ಯುಗದಲ್ಲಿ ಎದುರಿಸುತ್ತಿರುವ ಗೊಂದಲಗಳಿಂದ ಮಾನಸಿಕ ಒತ್ತಡ ಮತ್ತು ಆತಂಕದಿಂದ ಭಯ ಪಡುತಾರೆ. ಆದರೆ ಧೈರ್ಯದಿಂದ ಎದುರಿಸಬೇಕೆಂದು ಅರಿವು ಮೂಡಿಸಿಮಾರ್ಗದರ್ಶನ ನೀಡಲು “ಯುವ ಸ್ಪಂದನ “ ಕಾರ್ಯಕ್ರಮ ಜಾರಿಗೆ ಬಂದಿದೆ. ಸಮಸ್ಯೆಗಳಾದ ಸುರಕ್ಷತೆ, ಆರೋಗ್ಯ ಜೀವನ ಶೈಲಿ, ವ್ಯಕ್ತಿತ್ವ ಬೆಳವಣಿಗೆ, ಲಿಂಗ ಮತ್ತು ಲೈಂಗಿಕತೆ, ಭಾವನೆಗಳುಮತ್ತು ಸಮಬಂಧಗಳ ಕುರಿತು ಮಾಹಿತಿ ನೀಡುತ್ತದೆ “ಯುವ ಸ್ಪಂದನ ಕೇಂದ್ರ”ದ ದೂರವಾಣಿ ಸಂಖ್ಯೆಗೆ 9448299673 ಕರೆಮಾಡಿ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಯುವ ಸಮಾಲೋಚಕರಾದ ದೀಪಾ ಪೂಜಾರ ರವರು ತಿಳಿಸಿದ್ದಾರೆ.

# ಶ್ರೀ ಗಣೇಶ ಮೊಹರಂ ಹಬ್ಬಗಳನ್ನು ಸರಳ, ಎಚ್ಚರಿಕೆ ಮತ್ತು ಸೌಹಾರ್ದಯುತವಾಗಿ ಆಚರಿಸಿ: ಜಿಲ್ಲಾಧಿಕಾರಿ

ವಿಜಯಪುರ ಆಗಸ್ಟ್ : ಮುಂಬರುವ ಶ್ರೀ ಗಣೇಶ ಚತುರ್ಥಿ ಹಾಗೂ ಮೊಹರಂ ಹಬ್ಬಗಳನ್ನು ಕೋವಿಡ್ ಹಿನ್ನೆಲೆಯಲ್ಲಿ ಅತ್ಯಂತ ಜಾಗ್ರತಿಯಿಂದ ಹಾಗೂ ಸರ್ಕಾರದ ಪರಿಷ್ಕೃತ ಮಾರ್ಗಸೂಚಿಗಳನ್ವಯ ಆಚರಿಸುವಂತೆ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ಅವರು ಸಾರ್ವಜನಿಕರು, ಶ್ರೀ ಗಣೇಶ ಉತ್ಸವ ಮಂಡಳಿಗಳು ಮತ್ತು ಮುಸ್ಲಿಂ ಬಾಂಧವರಿಗೆ ಮನವಿ ಮಾಡಿದ್ದಾರೆ.

ನಗರದ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿಂದು ಶ್ರೀ ಗಣೇಶ ಹಬ್ಬ ಆಚರಣೆ ಮತ್ತು ಮೊಹರಂ ಹಬ್ಬದ ಆಚರಣೆ ಕುರಿತಂತೆ ನಡೆದ ಶಾಂತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಇದೇ ಆಗಸ್ಟ್ 22 ರಿಂದ ಆಚರಿಸಲಾಗುವ ಶ್ರೀ ಗಣೇಶ ಹಬ್ಬ ಮತ್ತು ಆಗಸ್ಟ್ 30 ರಂದು ಆಚರಿಸಲಾಗುವ ಮೊಹರಂ ಹಬ್ಬಗಳನ್ನು ಸರಳವಾಗಿ, ಶಾಂತಿ ಮತ್ತು ಸೌಹಾರ್ದಯುತವಾಗಿ ಹಾಗೂ ಕೋವಿಡ್ ಹಿನ್ನೆಲೆ ತಮ್ಮ ಕುಟುಂಬಗಳ ಹಿತದೃಷ್ಟಿಯಿಂದ ಅತ್ಯಂತ ಜಾಗೃತಿಯಿಂದ, ಸರ್ಕಾರದ ಪರಿಷ್ಕೃತ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಆಚರಿಸುವಂತೆ ಅವರು ಸಲಹೆ ನೀಡಿದ್ದಾರೆ.

ಶ್ರೀ ಗಣೇಶ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕ ಶ್ರೀ ಗಣೇಶ ಮಂಡಳಿಗಳು ಶ್ರೀ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಕಡ್ಡಾಯವಾಗಿ ಅನುಮತಿ ಮತ್ತು ಎನ್‌ಒಸಿ ಪಡೆಯಬೇಕು. ಅನುಮತಿಗೆ ಈ ಬಾರಿ ಯಾವುದೇ ಶುಲ್ಕ ಆಕರಿಸಲಾಗುವುದಿಲ್ಲ. ಆದರೆ ಶ್ರೀ ಗಣೇಶ ವಿಸರ್ಜನೆ ದಿನಗಳಾದ ಒಂದನೇ ದಿನಕ್ಕೆ 200 ರೂಪಾಯಿ, ಐದನೇ ದಿನಕ್ಕೆ 760 ರೂ, ಏಳನೇ ದಿನಕ್ಕೆ 1040 ರೂ, ಒಂಭತ್ತನೆ ದಿನಕ್ಕೆ 1320 ರೂ ಹಾಗೂ ಹನ್ನೊಂದನೇ ದಿನಕ್ಕೆ 1600 ರೂಗಳನ್ನು ಶ್ರೀ ಗಣೇಶ ವಿಸರ್ಜಿಸುವಂತಹ ಮಂಡಳಿಗಳು ವಿದ್ಯುತ್ ಬಿಲ್ ಚಲನ್‌ಗಳನ್ನು ತಕ್ಷಣ ಭರಣಾ ಮಾಡುವಂತೆ ಅವರು ಸೂಚನೆ ನೀಡಿದ್ದಾರೆ.

ಶ್ರೀ ಗಣೇಶ ಮಂಡಳಿಗಳು ಪರಿಸರ ಸ್ನೇಹಿ ಮಣ್ಣಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಬೇಕು. ಪೆಂಡಾಲ್‌ದಲ್ಲಿ ಕಡ್ಡಾಯವಾಗಿ 24*7 ಕಾರ್ಯಕರ್ತರು ಇರುವಂತೆ ನೋಡಿಕೊಳ್ಳಬೇಕು. ಕಡ್ಡಾಯವಾಗಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಬೇಕು. ಸಾಮಾಜಿಕ ಅಂತರ ಕಾಪಾಡಿಕೊಂಡು ಸೂಕ್ತ ಸ್ಯಾನಿಟೈಜರ್ ಮತ್ತು ಸ್ಯಾನಿಟೈಜೇಶನ್ ವ್ಯವಸ್ಥೆಯೊಂದಿಗೆ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡಬೇಕು. ಶ್ರೀ ಗಣೇಶ ಮಂಡಳಿಗಳ ಪಟ್ಟಿಯನ್ನು ಕಾರ್ಯಕರ್ತರ ಮಾಹಿತಿ, ಶ್ರೀ ಗಣೇಶ ವಿಸರ್ಜನಾ ದಿನಾಂಕ ನಮೂದಿಸಿ ನೀಡಬೇಕು. ಸರ್ಕಾರದ ನಿರ್ದೇಶನದನ್ವಯ ಗಾತ್ರದ ಶ್ರೀ ಗಣೇಶ ಪ್ರತಿಷ್ಠಾಪಿಸಬೇಕು. ವಿಸರ್ಜನೆ ಸಂದರ್ಭದಲ್ಲಿ ಮಹಾನಗರ ಪಾಲಿಕೆಗೆ, ಗ್ರಾಮಾಂತರ ಪ್ರದೇಶದಲ್ಲಿ ಆಯಾ ಪಿಡಿಒಗಳಿಗೆ ಕಡ್ಡಾಯವಾಗಿ ಮಾಹಿತಿ ನೀಡಿ, ಮೊಬೈಲ್ ವ್ಯಾನ್ ಮೂಲಕ ಪಡೆಯಲು ಹಾಗೂ ವಿಸರ್ಜಿಸಲು ಸಹಕರಿಸಬೇಕು ಎಂದು ಹೇಳಿದರು.



ಮನೆಗಳಲ್ಲಿ ಪ್ರತಿಷ್ಠಾಪಿಸುವಂತಹ ಶ್ರೀ ಗಣೇಶ ಮೂರ್ತಿಗಳನ್ನು ಮನೆ ಆವರಣದಲ್ಲಿ ವಿಸರ್ಜಿಸಲು ಕ್ರಮಕೈಗೊಳ್ಳಬೇಕು. ಈ ಬಾರಿ ಶ್ರೀ ಗಣೇಶ ಹಬ್ಬ ಮತ್ತು ಮೊಹರಂ ಹಬ್ಬಗಳಿಗೆ ಮೆರವಣಿಗೆಗಳಿಗೆ ಅವಕಾಶವಿರುವುದಿಲ್ಲ. ಆದರೆ ನಿಗದಿತ ಮೂರ್ತಿ ಮತ್ತು ಮೊಹರಂ ಪಂಜಾ–ತಾಜಿಯಾ ಪ್ರತಿಷ್ಠಾಪನಾ ಸ್ಥಳಗಳಲ್ಲಿ 20ಕ್ಕಿಂತ ಹೆಚ್ಚು ಸೇರದಂತೆ ಎಚ್ಚರಿಕೆ ವಹಿಸುವಂತೆ ತಿಳಿಸಿದ ಅವರು ಶ್ರೀ ಗಣೇಶ ಮಂಡಳಿಗಳ ಮತ್ತು ಸಾರ್ವಜನಿಕರು ಪೊಲೀಸ್ ಇಲಾಖೆಗೆ ತಮ್ಮ ಸಹಕಾರವನ್ನು ತಪ್ಪದೇ ನೀಡುವಂತೆ ತಿಳಿಸಿದರು.

ಈ ಎರಡು ಹಬ್ಬಗಳ ಆಚರಣೆ ಸಂದರ್ಭದಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಮದ್ಯಪಾನ ಮಾರಾಟ ಮತ್ತು ನಿಷೇಧದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಅನುಪಮ್ ಅಗರವಾಲ್ ಅವರು ಮಾತನಾಡಿ ಶತಮಾನದ ಮಹಾಮಾರಿ ಕೊರೋನಾ ಆಗಿರುವುದರಿಂದ ಕೋವಿಡ್–19 ಮುನ್ನೆಚ್ಚರಿಕೆ ಜೊತೆಗೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿಕೊಳ್ಳಲಾಗುವುದು. ಸರ್ಕಾರದ ಪರಿಷ್ಕೃತ ಮಾರ್ಗಸೂಚಿಗಳನ್ನು ಪ್ರತಿಯೊಬ್ಬರು ತಪ್ಪದೇ ಪಾಲಿಸಬೇಕು. ಸಾರ್ವಜನಿಕ ಶ್ರೀ ಗಣೇಶ ಪ್ರತಿಷ್ಠಾಪನೆಗೆ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಈ ಎರಡು ಹಬ್ಬಗಳಿಗೆ ಮೆರವಣಿಗೆಗೆ ಅವಕಾಶವಿರುವುದಿಲ್ಲ. ಸಂಗೀತ ವಾದ್ಯಕ್ಕೆ ನಿಷೇಧವಿದ್ದು, ಶ್ರದ್ಧಾಭಕ್ತಿಯಿಂದ ಆಚರಿಸಬೇಕು. ಸಾಮಾಜಿಕ ಅಂತರ, ಮಾಸ್ಕ್, ಸ್ಯಾನಿಟೈಜೇಶನ್ ವ್ಯವಸ್ಥೆ ಇರಬೇಕು. 20 ಜನಕ್ಕಿಂತ ಹೆಚ್ಚಿನ ಜನರು ಒಂದೇ ಕಡೆ ಸೇರಬಾರದು ಎಂದು ಹೇಳಿದರು.

ಸಾರ್ವಜನಿಕ ಸ್ಥಳ ಮತ್ತು ದೇವಸ್ಥಾನಗಳಲ್ಲಿ ಭಕ್ತಾದಿಗಳಿಗಾಗಿ ಕಡ್ಡಾಯವಾಗಿ ಸ್ಥಳ ಗುರುತು ಮಾಡಬೇಕು. ಮನೆಗಳ ಶ್ರೀ ಗಣೇಶ ಮೂರ್ತಿಗಳನ್ನು ತಮ್ಮ ತಮ್ಮ ಮನೆ ಆವರಣಗಳಲ್ಲಿ ವಿಸರ್ಜಿಸಬೇಕು. ಯಾವುದೇ ರೀತಿಯ ಕಾನೂನು ಉಲ್ಲಂಘನೆಯಾದಲ್ಲಿ ಸಾಂಕ್ರಾಮಿಕ ರೋಗ ನಿಯಂತ್ರಣ ಕಾಯ್ದೆ, ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆ ಮತ್ತು ಐಪಿಸಿ ಸೆಕ್ಷನ್ 188 ರನ್ವಯ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಹೇಳಿದರು.ಅದರಂತೆ ಶ್ರೀ ಗಣೇಶ ಮಂಡಳಿಗಳು ಪ್ರಚೋದನಾಕಾರಿ ಗೀತೆಗಳನ್ನು ಪ್ರಸಾರವಾಗದಂತೆ ಎಚ್ಚರಿಕೆ ವಹಿಸಬೇಕು. ಗ್ರಾಮ ಮತ್ತು ಊರುಗಳ ಜನರು ಕೈಜೋಡಿಸಿ ಈ ಎರಡು ಹಬ್ಬಗಳನ್ನು ಆಚರಿಸಬೇಕು. ಆಯಾ ತಾಲೂಕಾ ತಹಸೀಲ್ದಾರರು ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಕೂಡ ತಮ್ಮ ಜೊತೆಗಿರಲಿದ್ದು, ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ಸೂಕ್ತ ಸಹಕಾರ ನೀಡುವಂತೆ ಮನವಿ ಮಾಡಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಗೋವಿಂದ ರೆಡ್ಡಿ ಅವರು ಶ್ರೀ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ವಿಸರ್ಜನೆಗೆ ಸಮಾನ ನಿಯಮಗಳು ಇರಲಿವೆ. ಗ್ರಾಮದಲ್ಲಿ ಒಂದೇ ಗಣೇಶ ಪ್ರತಿಷ್ಠಾಪಿಸಲು ಮನವಿ ಮಾಡಿದ ಅವರು ಆಯಾ ಗ್ರಾಮ ಪಂಚಾಯತಗಳ ಮೂಲಕ ಸೂಕ್ತ ಸಹಕಾರ ದೊರಕಿಸಲಾಗುವುದು. ಸಾರ್ವಜನಿಕ ಶ್ರೀ ಗಣೇಶ ಪ್ರತಿಷ್ಠಾಪನೆಗೆ ಅನುಮತಿಗೆ ಯಾವುದೇ ಶುಲ್ಕ ಆಕರಿಸಲಾಗುವುದಿಲ್ಲ ಎಂದು ಹೇಳಿದರು.

ಮಹಾನಗರ ಪಾಲಿಕೆ ಆಯುಕ್ತ ಶ್ರೀ ಹರ್ಷಾ ಶೆಟ್ಟಿ ಅವರು ಸಾರ್ವಜನಿಕ ಗಣೇಶ ವಿಸರ್ಜನೆಗೆ ಕೃತಕ ಹೊಂಡಗಳನ್ನು ನಿರ್ಮಿಸಲಾಗುವುದು. ಸಾಮಾಜಿಕ ಅಂತರದೊಂದಿಗೆ ಶ್ರೀ ಗಣೇಶ ವಿಸರ್ಜಿಸಬೇಕು. ಗಾಂಧಿಚೌಕ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅನುಮತಿಗಾಗಿ ಐದು ಕೌಂಟರ್‌ಗಳನ್ನು ನಿರ್ಮಿಸಲಾಗುವುದು. ಸಹಾಯವಾಣಿ ನಂಬರ್ ಮತ್ತು ವಾಹನದ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮ ಅರಿಸಿದ್ಧಿ, ಡಿವೈಎಸ್ಪಿ ಲಕ್ಷ್ಮೀನಾರಾಯಣ, ಸಮಾಜದ ಮುಖಂಡರಾದ ಅಡಿವೆಪ್ಪ ಸಾಲಗಲ್, ಗೋಪಾಲ ಘಟಕಾಂಬಳೆ, ಶಿವಾಜಿ ಪಾಟೀಲ, ಶ್ರೀ ಭಕ್ಷಿ, ಶ್ರೀ ಸೈಯದ್ ಖಾದ್ರಿ, ಶ್ರೀ ಮುಶ್ರೀಫ್,ಶ್ರೀ ಮುಲ್ಲಾ, ಶ್ರೀ ಮುತ್ತು ಜಂಗಮಶೆಟ್ಟಿ, ಶ್ರೀ ಸುನೀಲ್ ಭೈರವಾಡಗಿ, ರಾಘು ಅಣ್ಣಿಗೇರಿ, ಶ್ರೀ ವಿಜಯ ಜೋಶಿ, ಶ್ರೀ ರವಿ ಚವ್ಹಾಣ ಸೇರಿದಂತೆ ಶ್ರೀ ಗಣೇಶ ಮಂಡಳಿಗಳ ಪದಾಧಿಕಾರಿಗಳು ಉಪಸ್ಥಿತರಿದ್ದು, ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.